# KANNADA CODE: 015
# 2018 – 19
# SAMPLE QUESTION PAPER

**SUBJECT : KANNADA** **CLASS : X**

**ಅನುಮತಿಸಲಾದ ಸಮಯ : ೩ಗಂಟೆ** **ಗರಿಷ್ಠ ಅಂಕಗಳು : ೮೦**

Time allowed : 3 hours. Maximum Marks : 80

**ಸೂಚನೆಗಳು : ಈ ಪ್ರಶ್ನೆ ಪತ್ರಿಕೆಯು ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.**

| | |
|---|---|
| ವಿಭಾಗ – **A** (ವಾಚನ ಮತ್ತು ಗ್ರಹಿಕಾ ಕೌಶಲ) | : **12** ಅಂಕಗಳು |
| ವಿಭಾಗ – **B** (ಬರವಣಿಗೆ ಕೌಶಲ) | : **15** ಅಂಕಗಳು |
| ವಿಭಾಗ – **C** (ಅನ್ವಯಿಕ ವ್ಯಾಕರಣ) | : **18** ಅಂಕಗಳು |
| ವಿಭಾಗ – **D** (ಪಠ್ಯಗಳ ಅಧ್ಯಯನ) | : **35** ಅಂಕಗಳು |

---

## A – (Reading Section) : 12 Marks
## ವಿಭಾಗ – ಎ (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು

**ಪ್ರಶ್ನೆ 1. 1. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ**

'ಅಯ್ಯೋ, ನನಗೆ ವೇಳೆ ಸಾಲದು' ಎಂದು ಕೊರಗುವವರು ಬಹಳ ಮಂದಿ ಇದ್ದಾರೆ. ವೇಳೆ ಎನ್ನುವುದು ಬಂಡವಾಳ ಹೂಡಿಕೆಯಿದ್ದಂತೆ. ಯಾರು ಇರುವ ಸಮಯವನ್ನು ಸರಿಯಾಗಿ, ಸಮರ್ಪಕವಾಗಿ ನಿರ್ವಹಿಸಬಲ್ಲರೋ ಅವರು ಜೀವನವನ್ನು ಚೆನ್ನಾಗಿ ನಿರ್ವಹಿಸಬಲ್ಲರು. 'ಹೊತ್ತೇ ಮುತ್ತು' ಎಂದು ಬಲ್ಲವರು ಹೇಳುತ್ತಾರೆ. ಆದ್ದರಿಂದ ಸಮಯ ಪ್ರಜ್ಞೆ ಇದ್ದವರಿಗೆ ಯಶಸ್ಸು ಕಟ್ಟಿಟ್ಟ ಬುತ್ತಿ.

ಯಾರಲ್ಲಿ ಜೀವನದ ಬಗ್ಗೆ ಸ್ಪಷ್ಟವಾದ ಗುರಿಯಿರುವುದಿಲ್ಲವೋ ಅಂತಹವರು ಸಮಯವನ್ನು ಬೇಕಾಬಿಟ್ಟಿಯಾಗಿ ಪೋಲು ಮಾಡುತ್ತಿರುತ್ತಾರೆ. ಸಮಯದ ಅಪವ್ಯಯಕ್ಕೆ ಹೆಚ್ಚಾಗಿ ಆಲಸ್ಯವೇ ಕಾರಣವಾಗಿರುತ್ತದೆ. ತಡವಾಗಿ ಎದ್ದು ಗಡಿಬಿಡಿಯಲ್ಲಿ ಹೊರಟು ಶಾಲೆಗೆ ಅಥವಾ ಕಾಲೇಜಿಗೆ ಓಡುವುದರಿಂದ ಉದ್ವಿಗ್ನತೆ ಹೆಚ್ಚಾಗುತ್ತದೆ. ಪರೀಕ್ಷೆಯ ಸಮಯದಲ್ಲಿ ರಾತ್ರಿ ಬಹಳ ಹೊತ್ತಿನವರೆಗೆ ಓದುವುದರಿಂದ ಬೆಳಿಗ್ಗೆ ಬೇಗ ಏಳಲಾಗದೆ ಸರಿಯಾದ ಸಮಯಕ್ಕೆ ಪರೀಕ್ಷಾ ಸ್ಥಳವನ್ನು ಸೇರಲಾಗುವುದಿಲ್ಲ. ಅಷ್ಟೇ ಅಲ್ಲದೆ ಆ ಗಡಿಬಿಡಿಯಲ್ಲಿ ಓದಿದ್ದೆಲ್ಲಾ ಮರೆತುಹೋಗಬಹುದು. ಇದಕ್ಕೆ ಮದ್ದೆಂದರೆ ವೇಳಾಪಟ್ಟಿಯೊಂದನ್ನು ತಯಾರಿಸಿಕೊಂಡು ಅದನ್ನು ಅನುಸರಿಸುವುದು. ಇದರಿಂದ ಯಾವ ಕೆಲಸವನ್ನು ಯಾವಾಗ ಮಾಡಬೇಕೆಂಬುದು ತಿಳಿಯುವುದಲ್ಲದೆ ಸಮಯವನ್ನು ಸರಿಯಾಗಿ ಬಳಸಿಕೊಂಡು ಬದುಕಿನಲ್ಲಿ ನಾವು ಇಟ್ಟುಕೊಂಡ ಗುರಿಯನ್ನೂ ಕೂಡ ಸಮರ್ಥವಾಗಿ ತಲುಪಲು ಸಾಧ್ಯವಾಗುತ್ತದೆ.

**ಪ್ರಶ್ನೆಗಳು:**

1) ಯಶಸ್ಸನ್ನು ಹೇಗೆ ಪಡೆಯಬಹುದು? **1**
2) ಸಮಯದ ಬಗ್ಗೆ ಬಲ್ಲವರು ಏನೆಂದು ಹೇಳಿದ್ದಾರೆ? **1**
3) ವಿದ್ಯಾರ್ಥಿಗಳು ಪರೀಕ್ಷೆಯ ಸಮಯದಲ್ಲಿ ತಡವಾಗಿ ಎದ್ದರೆ ಏನಾಗುತ್ತದೆ? **2**
4) ವೇಳೆಯನ್ನು ಬಂಡವಾಳ ಹೂಡಿಕೆಗೆ ಏಕೆ ಹೋಲಿಸಿದ್ದಾರೆ? **2**

**2. ಕೆಳಗಿನ  ಪದ್ಯಭಾಗವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**

ಮೊನ್ನೆ ಮೊನ್ನೆ ನಡೆಯಿತಲ್ಲ ಬಾಹುಬಲಿಯ ಮಜ್ಜನ
ಬೆಟ್ಟದಲ್ಲಿ ಕೇಳಿತೊಂದು ಪುಟ್ಟ ಮಗುವು ಅಜ್ಜನ
"ಈತನಾರು ತಾತ ಇಲ್ಲಿ ನಿಂತು ಏನು ಮಾಡುತಿರುವನು?"
ಇಂದ್ರಗಿರಿಯ ನೆತ್ತಿಯಲ್ಲಿ ಏನು ಮಾಡುತಿರುವನು?"

"ಇವನೇ ಬಾಹುಬಲಿಯು ಮಗು ಧೀರತನದ ಮೂರ್ತಿಯು
ಹತ್ತುವವರ ಇಳಿಯುವವರ ನಿಂತು ನೋಡುತಿರುವನು.
ನಿಲ್ಲುವವರ ನಡೆಯುವವರ ಲೆಕ್ಕ ಮಾಡುತಿರುವನು
ಬಳಲಿದವರಿಗೆಲ್ಲ ಇಲ್ಲಿ ಕೈಯ ನೀಡುತಿರುವನು"

"ಇಲ್ಲಿ ಏಕೆ ಬಂದು ನಿಂತ? ಇಷ್ಟು ದೂರ ಎತ್ತರ!
ಭಯವಾಗದೆ ಇವನಿಗಿಲ್ಲಿ ಯಾರೂ ಇಲ್ಲ ಹತ್ತಿರ?"

ಇವನಿಗೆಲ್ಲಿ ಭಯವು ಮಗು ಅಭಯ ಮೂರ್ತಿ ಈತನು
ಭರತ ಚಕ್ರವರ್ತಿ ಇವನ ಅಣ್ಣ ಒಮ್ಮೆ ಆತನು
ಹಮ್ಮಿನಲ್ಲಿ ಬಂದು ಸೆಣಸಿ ತಮ್ಮನಲ್ಲಿ ಸೋತನು.

"ತಾತ, ಎರೆವ ಮುಂಚೆ ಎಣ್ಣೆ ಹಚ್ಚಿ ಅಮ್ಮ ನನಗೆ ಹೀಗೆಯೇ
ನಿಲ್ಲಿಸುವಳು ಬಾಹುಬಲಿಯು ಕೂಡ ತನ್ನ ಹಾಗೆಯೇ
ನಿಂತು ಕಾಯುತಿರುವ ಕಣ್ಣ ತೆರೆದು ಮೊದಲ ಚೆಂಬಿಗೆ.

**ಕವಿ :– ಸು. ರಂ. ಯಕ್ಕುಂಡಿ**

**ಪ್ರಶ್ನೆಗಳು :–**

1) ಅಜ್ಜನನ್ನು ಮಗುವು ಏನೆಂದು ಕೇಳಿತು? **1**
2) ಬಾಹುಬಲಿಯ ಸಹೋದರ ಯಾರು? **1**
3) ಬಾಹುಬಲಿಯು ಬೆಟ್ಟದ ಮೇಲೆ ನಿಂತು ಏನು ಮಾಡುತ್ತಿರುವನು? **2**
4) ಮಗು ತಾನೂ, ಬಾಹುಬಲಿಯೂ ಒಂದೇ ಎಂದು ಏಕೆ ಹೇಳುವುದು? **2**

## B – (Writing Section) :  15 Marks

### ವಿಭಾಗ – ಬಿ (ಬರವಣಿಗೆಯ ಕೌಶಲ) : 15 ಅಂಕಗಳು

**ಪ್ರಶ್ನೆ 2. ಕೆಳಗಿನವುಗಳಲ್ಲಿ  ಯಾವುದಾದರೂ ಒಂದು ವಿಷಯದ ಬಗ್ಗೆ 150 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ** **6**

1. ಮಹಿಳಾ ಸಬಲೀಕರಣ
2. ಸಾಮಾಜಿಕ ಪಿಡುಗುಗಳು
3. ರಾಷ್ಟ್ರೀಯ ಹಬ್ಬಗಳ ಮಹತ್ವ

**ಪ್ರಶ್ನೆ 3**. ಜ್ಞಾನಗಂಗಾ ವಿದ್ಯಾಸಂಸ್ಥೆ, ಹೊಸೂರು ಇಲ್ಲಿ ಖಾಲಿ ಇರುವ ಕನ್ನಡ ಅಧ್ಯಾಪಕರ ಹುದ್ದೆಗೆ ನೇಮಕಾತಿ ಕೋರಿ ಬಸವರಾಜ ಎಸ್., ಮಯನೂರು ಆಗಿರುವ ನೀವು ಸಂಸ್ಥೆಯ ಅಧ್ಯಕ್ಷರಿಗೊಂದು ಅರ್ಜಿ ಸಲ್ಲಿಸಿರಿ.

**ಅಥವಾ**

ನಿಮ್ಮ ಹೆಸರು ಕೆ. ಶಂಕರ್. ಊರು ನೇಗಿನಹಾಳ, ಮೈಸೂರು. ನಿಮ್ಮ ಊರಿನ ರಸ್ತೆ ಹಾಳಾಗಿದೆ. ಅದರಿಂದ ಆಗುತ್ತಿರುವ ತೊಂದರೆಗಳನ್ನು ವಿವರಿಸಿ, ಗ್ರಾಮ ಪಂಚಾಯತಿಯ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ. **5**

**ಪ್ರಶ್ನೆ 4**. ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯೋತ್ಸವದ ಬಗ್ಗೆ ಒಂದು ವರದಿ ತಯಾರಿಸಿರಿ. **4**

## C – (Grammar) : 18 Marks
### ವಿಭಾಗ – ಸಿ (ಅನ್ವಯಿಕ ವ್ಯಾಕರಣ) : 18 ಅಂಕಗಳು

**ಪ್ರಶ್ನೆ 5. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ.**

**1.** ಈ ಪದಗಳಿಗೆ ತತ್ಸಮ/ತದ್ಭವಗಳನ್ನು ಬರೆಯಿರಿ : ವಂಶ, ಬಣ್ಣ. **1**

**2.** ಈ ಪದಗಳ ಗ್ರಾಂಥಿಕ ರೂಪ ಬರೆಯಿರಿ : ಹೀಂಗ, ಕಳುವ್ಯಾರೆ. **1**

**3.** ಈ ವಾಕ್ಯವನ್ನು ಸಂಭಾವನಾರ್ಥಕ ರೂಪಕ್ಕೆ ಪರಿವರ್ತಿಸಿ. **1**
"ಮಕ್ಕಳು ಪುಸ್ತಕಗಳನ್ನು ಓದಲಿ"

**4.** ಈ ಪದಗಳ ವಿಭಕ್ತಿ ಪ್ರತ್ಯಯವನ್ನು ಹೆಸರಿಸಿರಿ : ಸಂಶಯದೊಳ್, ಬಿರುಗಾಳಿಗೆ. **1**

**5.** ಈ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಪರಿವರ್ತಿಸಿ. **1**
ವಿಶ್ವೇಶ್ವರಯ್ಯನವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದರು.

**6.** ಮಾಡುವನು, ಉಂಡನು – ಈ ಪದಗಳ ಧಾತುರೂಪ ಬರೆಯಿರಿ. **1**

**7.** ಈ ನುಡಿಗಟ್ಟನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ : ಘಾಸಿಗೊಳಿಸು, ಒಳಗಿಂದೊಳಗೆ. **2**

**8.** ಈ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ತಿಳಿಸಿ : ಬಲ್ಲೆನೆಂದು, ನಿಜಾಶ್ರಮ. **2**

**9.** ಈ ಪದಗಳನ್ನು ವಿಗ್ರಹಿಸಿ, ಸಮಾಸದ ಹೆಸರು ತಿಳಿಸಿ : ಗಿರಿವನದುರ್ಗಗಳು, ಹೊಗೆದೋರು. **2**

**10.** ಕೆಳಗಿನ ಪದಗಳಿಗೆ ಸಮಾನಾರ್ಥಕ ಪದವನ್ನು ಬರೆಯಿರಿ. **1**
ಅನೃತ, ತಿರೆ.

**11.** ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ. **1**
ಅ. ಕುರುಡ–ಅನ್ವರ್ಥನಾಮ :: ಬೆಟ್ಟ ––––––
ಆ. ಕಟ್ಟಕಡೆಗೆ–ದ್ವಿರುಕ್ತಿ :: ಫಳಫಳ –––––

**12.** ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ. **1**
ಭಯ, ಸ್ತುತಿ.

**13.** ಈ ವಾಕ್ಯವನ್ನು ವರ್ತಮಾನ ಕಾಲಕ್ಕೆ ಬದಲಾಯಿಸಿ. **1**
ಜನರು ಮಳೆಗಾಗಿ ದೇವರನ್ನು ಪ್ರಾರ್ಥಿಸಿದರು.

**14.** ಇವುಗಳಲ್ಲಿ ಒಂದು ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ. **2**
ಅ) ತಾಳಿದವನು ಬಾಳಿಯಾನು.
ಆ) ಮನಸ್ಸಿದ್ದರೆ ಮಾರ್ಗ.

## D – Literature Section : (Text – Part 1 – Prose and Poetry) : 35 Marks

**ವಿಭಾಗ – ಡಿ (ಪಠ್ಯಗಳ ಅಧ್ಯಯನ) : 35 ಅಂಕಗಳು**

**ಪ್ರಶ್ನೆ 6. ಕೆಳಗಿನ ಪ್ರತಿ ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **10**

1. ಶಬರಿ ಈ ಋಷಿಯ ಶಿಷ್ಯೆ.––––
   (ವಾಲ್ಮೀಕಿ, ವಿಶ್ವಾಮಿತ್ರ, ಮತಂಗ, ವಸಿಷ್ಠ )
2. ಪೂಲವರ್ಥ ಎಂಬುದು –––– ಅಂಗಡಿ.
   (ಸ್ಟೇಶನರಿ, ಔಷಧ, ಬಟ್ಟೆ, ತರಕಾರಿ )
3. ಇದು ಶಾನುಭೋಗರ ಬ್ರಹ್ಮಾಸ್ತ್ರ –––––
   ( ಭಗವದ್ಗೀತೆ, ಮಿನುಗು ಮಿಂಚು ಪುಸ್ತಕ, ಖಿರ್ದಿ ಪುಸ್ತಕ, ಸರ್ಪಾಸ್ತ್ರ)
4. ವಡ್ಡಾರಾಧನೆಯಲ್ಲಿ –––– ಕಥೆಗಳಿವೆ.
   (12, 18, 16, 19)
5. ವಚನಕಾರರಿಗೆ –––– ದೇವರಾಗಿತ್ತು.
   ( ಪ್ರಜ್ಞೆ, ಕಾಯಕ, ಲಿಂಗ, ವಚನಗಳು)
6. ಗದುಗಿನ ಭಾರತವು ಈ ಷಟ್ಪದಿಯಲ್ಲಿದೆ. ––––
   (ಶರ, ಕುಸುಮ, ಭೋಗ, ಭಾಮಿನಿ)
7. ಇದು "ಹಸುರು" ಪದ್ಯದ ಆಕರ ಗ್ರಂಥ.
   (ವಜ್ರಗಳು, ಪಕ್ಷಿಕಾಶಿ, ಮೈಸೂರು ಮಲ್ಲಿಗೆ, ಸಮುದ್ರ ಗೀತೆಗಳು)
8. ಈ ಕವಿಗೆ 'ಕವಿ ಚಕ್ರವರ್ತಿ' ಎಂಬ ಬಿರುದಿದೆ. ––––
   ( ಪಂಪ, ರನ್ನ, ಪೊನ್ನ, ಹರಿಹರ)
9. ಕವಿ ಲಕ್ಷ್ಮೀಶ ಬರೆದ ಕಾವ್ಯ ––––
   ( ಮಹಾಭಾರತ, ಜಯಭಾರತ, ಜೈಮಿನಿ ಭಾರತ, ಗದುಗಿನ ಭಾರತ)
10. ಹಲಗಲಿ ಗ್ರಾಮ ಈ ಜಿಲ್ಲೆಯಲ್ಲಿದೆ.––––
    (ದಾವಣಗೆರೆ, ಬಾಗಲಕೋಟೆ, ಬಿಜಾಪುರ, ಗುಲ್ಬರ್ಗ,)

**ಪ್ರಶ್ನೆ 7. ಈ ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ.** **3x4=12**

1. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು?
2. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ" ಈ ಮಾತನ್ನು ಸಂದರ್ಭಸಹಿತ ವಿವರಿಸಿರಿ.

   **ಅಥವಾ**

   "ರಿಸಿಯರ ರೂಪಂ ಕಾಣ್ಗುಮಂದೀತನುಂ ತಪಂಬಡುಗುಮ್" ಈ ಮಾತಿನ ಸಂದರ್ಭಸ್ವಾರಸ್ಯ ವಿವರಿಸಿ.

3. ಹಲಗಲಿಯ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?

4. **"ಹೊಸ ಎಚ್ಚರದೊಳು ಬದುಕೋಣ"** ಈ ಮಾತನ್ನು ಸಂದರ್ಭಸಹಿತ ವಿವರಿಸಿ.

**ಅಥವಾ**

**"**ನೆಲಕಿರಿವೆನೆಂದು ಬಗೆದಿರೆ ಚಲಕಿರಿವೆಂ**"** ಈ ಮಾತಿನ ಸಂದರ್ಭಸ್ವಾರಸ್ಯ ವಿವರಿಸಿ.

**ಪ್ರಶ್ನೆ 8. ಈ ಕೆಳಗಿನ ಪ್ರಶ್ನೆಗಳಿಗೆ 7–8 ವಾಕ್ಯಗಳಲ್ಲಿ ಉತ್ತರಿಸಿರಿ.** **4X2=8**

1. ಯುದ್ಧದಿಂದ ಆಗುವ ಅನಾಹುತಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

**ಅಥವಾ**

ದುಷ್ಟಬುದ್ಧಿಯ ತಂತ್ರ ಅವನಿಗೇ ತಿರುಗುಬಾಣವಾದ ಬಗೆಯನ್ನು ವಿವರಿಸಿ.

2. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತ ಕವಿ ಬೇಂದ್ರೆಯವರು ಹೇಳಿರುವ ಮಾತುಗಳೇನು?

**ಅಥವಾ**

ದ್ರೋಣನು ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಆಂಶಗಳನ್ನು ವಿವರಿಸಿ.

## Part 2 : Nondetailed : (5 Marks)

**(ಪಠ್ಯ ಪೋಷಕ ಅಧ್ಯಯನ )**

**ಪ್ರಶ್ನೆ 9. ಈ ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿರಿ.** **1X5=5**

1. ವಿವೇಕಾನಂದರು ಯಾವುದಕ್ಕೆ ಮೊದಲನೆಯ ಆದ್ಯತೆಯನ್ನು ನೀಡಬೇಕೆಂದಿದ್ದಾರೆ?
2. ವಸಂತ ಯಾರಿಗೆ ಮುಖ ತೋರಲಿಲ್ಲ?
3. ಜಲಿಯನ್‌ವಾಲಾಭಾಗ್‌ನಲ್ಲಿರುವ ಒಕ್ಕಣೆ ಏನು?
4. ಬಡತನ ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ ಏಕೆ?
5. 'ಅಂಗಿ' ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿ.

**********************